ಧಾರವಾಡ ಶಹರದ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ

೧೭೪ ಶ್ರೀ ಎಸ್. ಆರ್. ಮೋರೆ (ಧಾರವಾಡ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಧಾರವಾಡ ನಗರ ವಲಯದಲ್ಲಿ ನಿವೇಶನಗಳು ಗೃಹಗಳು ಮಂಜೂರಾತಿಗಾಗಿ ಅಧಿಕ ಸಂಖ್ಯೆಯಲ್ಲಿ ಸಾರ್ವಜನಿಕರು ಅರ್ಜಿಗಳನ್ನು ಸಲ್ಲಿಸಿರುವ ವಿಚಾರವು ನಿಜವಲ್ಲವೆ?

ಆ) ಹಾಗಿದ್ದಲ್ಲಿ, ಜನರಿಂದ ಬೇಡಿಕೆ ಹೆಚ್ಚಿದಲ್ಲಿ ನಗರ ಸಮೀಪ ಭೂ ಸ್ವಾಧೀನ ಮಾಡಿಕೊಂಡ ನಿವೇಶನರಹಿತರು ಹಾಗೂ ಗೃಹಗಳಿಲ್ಲದವರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಲು ಸರ್ಕಾರದವರು ಆಲೋಚಿಸಿದ್ದಾರೆಯೇ ?

ಇ) ಹಾಗಿದ್ದಲ್ಲಿ ಎಷ್ಟು ಅವಧಿಯಲ್ಲಿ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಹಾಗೂ ಇಂತಹ ಸೌಲಭ್ಯಗಳನ್ನು ಎಷ್ಟು ಜನರಿಗೆ ನಿಡಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮಂತ್ರಿ, ನಗರಾಭಿವೃದ್ಧಿ ಸಚಿವರು).—

ಅ) ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಈ ತನಕ ಒಟ್ಟು ೯೨೪ ಅರ್ಜಿಗಳನ್ನು ನಿವೇಶನಕ್ಕಾಗಿ ಸ್ವೀಕರಿಸಲಾಗಿದೆ. ಗೃಹಗಳ ಮಂಜೂರಾತಿಗಾಗಿ ಅರ್ಜಿಗಳು ಬಾಕಿ ಇರುವುದಿಲ್ಲ.

ಆ) ಹೌದು

ಇ) ಭೂ ಸ್ವಾಧೀನತಾ ಕ್ರಮ ಅಂತಿಮವಾದ ತಕ್ಷಣ ಪ್ರಾಧಿಕಾರ ಪತಿಯಿಂದ ಲೇಔಟು ಅಭಿವೃದ್ಧಿಪಡಿಸಿ ನಿವೇಶನಗಳನ್ನು ವಿತರಣೆ ಮಾಡಲಾಗುವುದು ಸುಮಾರು ೧೦೦೦ (ಒಂದು ಸಾವಿರ) ನಿವೇಶನಗಳನ್ನು ೮ ತಿಂಗಳ ಅವಧಿಯಲ್ಲಿ ವಿತರಿಸಲು ಸಾಧ್ಯವಾಗಬಹುದು.

ಹುಬ್ಬಳ್ಳಿ-ಧಾರವಾಡ ನಗರಸಭೆಗೆ ರೋಜಗಾರ್ ಯೋಜನೆ ಸಾಲ ವಿತರಣೆ ಕುರಿತು

೧೭೫. ಶ್ರೀ ಎಸ್. ಆರ್. ಮೋರೆ (ಧಾರವಾಡ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ರೋಜಗಾರ ಯೋಜನೆಯನ್ವಯ ಸಾಲ ಕ್ಕೋಸ್ಕರ ಬಡಜನರು ಅದರಲ್ಲೂ ಹರಿಜನ ಗಿರಿಜನರು ದುರ್ಬಲ ವರ್ಗದವರು ಹಣ ವ್ಯಯಮಾಡಿ ಅರ್ಜಿ ಸಲ್ಲಿಸಿರುವ ವಿಚಾರವು ನಿಜವೆ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಇದುವರೆವಿಗೂ ಯಾವುದೇ ನಿರ್ಣಯ ತೆಗೆದುಕೊಂಡಿಲ್ಲದ ಪ್ರಯುಂಕ ಈ ಜನರು ತೊಂದರೆಗೊಳಗಾಗಿಲ್ಲವೆ.

ಇ) ಈ ಬಗ್ಗೆ ಮಹಾನಗರ ಸಭೆಯು ನಿರ್ಣಯವನ್ನು ತೆಗೆದುಕೊಳ್ಳಲು ವಿಳಂಭವಾದುದಕ್ಕೆ ಕಾರಣಗಳೇನು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮಂತ್ರಿ, ನಗರಾಭಿವೃದ್ಧಿ ಸಚಿವರು).—

ಅ) ನೆಹರು ರೋಜಗಾರ ಯೋಜನೆಯಡಿಯಲ್ಲಿ ಬಡಜನರಿಗೆ ಅದರಲ್ಲೂ ವಿಶೇಷವಾಗಿ ದುರ್ಬಲ ವರ್ಗದವರು ಹಾಗೂ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಆರ್ಥಿಕ ಸೌಲಭ್ಯಗಳನ್ನು ನೀಡಲು ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯವರು ಅರ್ಜಿಗಳನ್ನು ಕರೆದಿರುವುದು ನಿಜವಾಗಿರುತ್ತದೆ. ಅರ್ಜಿ ನಮೂನೆಗಳನ್ನು ಉಚಿತವಾಗಿ ನೀಡಿರುವುದರಿಂದ ಅರ್ಜಿ ಸಲ್ಲಿಸಲು ಹಣ ಖರ್ಚು ಮಾಡುವ ಪ್ರಮೇಯವಿರುವುದಿಲ್ಲ.

ಆ) ಅರ್ಜಿ ಸಲ್ಲಿಸಿರುವ ಅರ್ಹ ಫಲಾನುಭವಿಗಳನ್ನು ಗುರುತಿಸುವ ಕಾರ್ಯವನ್ನು ಉಪ ಸಮಿತಿಗಳ ರಚನೆ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ. ಇದರಿಂದ ಜನತೆಯು ಕಷ್ಟದಿಂದ ಬಳಲುತ್ತಿದ್ದಾರೆ ಎಂಬುದು ನಿಜವಲ್ಲ.

ಇ) ವಿಳಂಬವಾಗಿರುವುದಿಲ್ಲ.